KAUK010010262022

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಉತ್ತರ ಕನ್ನಡ, ಕಾರವಾರ**

**ಸೇಷನ್ಸ ಕೇಸ ನಂ. 26/2022**

ಫಿರ್ಯಾದಿ - ಸರ್ಕಾರ - ಭಟ್ಕಳ ಗ್ರಾಮೀಣ ಪೋಲಿಸ ಠಾಣೆ

- ವಿರುದ್ಧ -

ಆರೋಪಿ/ಗಳು - 1) ಅಬ್ರಾರ್ ಶೇಖ್ ತಂದೆ ಮೋಹಿದ್ದೀನ್ ಶೆಕ್ ಮತ್ತು 2) ಮಫ್ಹದ ಮಂಜೂರ್ ತಂದೆ ಅಬ್ದುಲ್ ಕರೀಮ್ ಶಾಬಂದ್ರಿ.

**ದೋಷಾರೋಪಣೆ**

ಶ್ರೀ ಮಾಯಣ್ಣ ಬಿ.ಎಲ್., ಬಿ.ಎ. ಎಲ್.ಎಲ್.ಬಿ. 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ, ಕಾರವಾರ ಆದ ನಾನು, ಆರೋಪಿಗಳಾದಃ

1. ಅಬ್ರಾರ್ ಶೇಖ್ ತಂದೆ ಮೊಹಿದ್ದೀನ್ ಶೆಕ್
   ತಂದೆ ಮೊಹಿದ್ದೀನ್ ಶೆಕ್
   ವಯಸ್ಸುಃ 20 ವರ್ಷ
   ವೃತ್ತಿಃ ಚಾಲಕ ಕೆಲಸ
   ಸಾಃ ಪಿರ್ದೋಶ ನಗರ, ಹೆಬಳೆ
   ತಾಃ ಭಟ್ಕಳ.
2. ಮಫ್ಹದ ಮಂಜೂರ್ ತಂದೆ ಅಬ್ದುಲ್ ಕರೀಮ್ ಶಾಬಂದ್ರಿ
   ತಂದೆ ಅಬ್ದುಲ್ ಕರೀಮ್ ಶಾಬಂದ್ರಿ
   ವಯಸ್ಸುಃ 26 ವರ್ಷ
   ವೃತ್ತಿಃ ಗ್ರೀನ ಗಾರ್ಡನ ನರ್ಸರಿ
   ಸಾಃ ಹನೀಫಾಬಾದ ಮುನೀರ್ ಪಳ್ಳಿ ಹತ್ತಿರ,
   ಹೆಬಳೆ, ತಾಃ ಭಟ್ಕಳ.

ನಿಮ್ಮ ಮೇಲೆ ಹೋರೆಸುವ ದೋಷಾರೋಪಣೆ ಏನೆಂದರೆಃ

ಭಟ್ಕಳ ತಾಲೂಕ ಪೈಕಿ ಭಟ್ಕಳದ ಶಿರಾಲಿಯಲ್ಲಿ, ರಾಷ್ಟ್ರೀಯ ಹೆದ್ದಾರಿ 66 ರಸ್ತೆಯಲ್ಲಿ, ದಿನಾಂಕ 23/01/2022 ರಂದು ಬೆಳಗಿನ ಜಾವ 4-00 ಗಂಟೆಯ ಸಮಯಕ್ಕೆ, ಆರೋಪಿಗಳಾದ ನೀವುಗಳು ಹಾಗೂ ಮತ್ತೊಬ್ಬ ಆರೋಪಿಯಾದ ಸಿಬ್ಬತುಲ್ಲಾ ಜೊತೆ ಸೇರಿಕೊಂಡು ರಾತ್ರಿ ಹೊತ್ತಿನಲ್ಲಿ

ರಸ್ತೆ ಬದಿಯಲ್ಲಿರುವ ಬಿದಾಡಿ ದನಗಳನ್ನು ಹಿಡಿದು ತಂದು ಕಡಿದು ಮಾಂಸ ಮಾರಾಟ ಮಾಡಿ ಹಣ ಸಂಪಾದಿಸುವ ಉದ್ದೇಶದಿಂದ, ಮುರ್ಡೇಶ್ವರದ ರಸ್ತೆ ಬದಿಯಲ್ಲಿರುವ ಒಂದು ಬಿದಾಡಿ ದನವನ್ನು ಕಳುವು ಮಾಡಿದ್ದರಿಂದ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 379 ಸಹವಾಚಕ 34 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿದ್ದೀರಾ ಎಂದು ಆರೋಪಿಸಲಾಗಿರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಗಳಾದ ನೀವುಗಳು ಹಾಗೂ ಮತ್ತೊಬ್ಬ ಆರೋಪಿಯಾದ ಸಿಬ್ಬತುಲ್ಲಾ ಜೊತೆ ಸೇರಿಕೊಂಡು ಮುರ್ಡೇಶ್ವರದ ರಸ್ತೆ ಬದಿಯಲ್ಲಿರುವ ಒಂದು ಬಿದಾಡಿ ದನವನ್ನು ಕಳುವು ಮಾಡಿ 1 ನೇ ಆರೊಪಿತನ ಮಾಲಿಕತ್ವದಲ್ಲಿರುವ ಮಾರುತಿ ಸ್ವಿಪ್ಟ್ ಕಾರ ನಂ. ಕೆಎ -47/ ಎಮ್ -3737 ನೇದರಲ್ಲಿ ಅಕ್ರಮವಾಗಿ ಹಾಕಿಕೊಂಡು ಮುರ್ಡೇಶ್ವರ ಕಡೆಯಿಂದ ಭಟ್ಕಳ ಕಡೆಗೆ ಕಾರನ್ನು ಅತೀ ವೇಗವಾಗಿ ಚಲಾಯಿಸಿಕೊಂಡು ಬಂದು, ಶಿರಾಲಿ ಚೆಕ್ ಪೋಸ್ಟನಲ್ಲಿ ಸಮವಸ್ತ್ರದಲ್ಲಿ ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದ ಫಿರ್ಯಾದಿ ಹಾಗೂ ಸಾಕ್ಷಿದಾರ 4 ಮತ್ತು 5 ನೇಯವರು ನಿಮ್ಮ ಕಾರನ್ನು ತಪಾಸಣೆ ಮಾಡಲು ಕೈ ಸನ್ನೆ ಮಾಡಿ ಕಾರನ್ನು ನಿಲ್ಲಿಸಲು ಮುಂದಾದಾಗ, ನೀವು ರಸ್ತೆಗೆ ಅಡ್ಡಲಾಗಿ ಹಾಕಿದ ಬ್ಯಾರಿಕೇಡ್‌ಗಳಿಗೆ ಕಾರನ್ನು ಡಿಕ್ಕಿ ಹೊಡೆದು ಸ್ಥಳದಲ್ಲಿ ಕಾರನ್ನು ನಿಲ್ಲಿಸದೇ ಚಲಾಯಿಸಿಕೊಂಡು ಹೋಗಿದ್ದರಿಂದ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 279 ಸಹವಾಚಕ 34 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿದ್ದೀರಾ ಎಂದು ಆರೋಪಿಸಲಾಗಿರುತ್ತದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಗಳಾದ ನೀವುಗಳು ಹಾಗೂ ಮತ್ತೊಬ್ಬ ಆರೋಪಿಯಾದ ಸಿಬ್ಬತುಲ್ಲಾ ಜೊತೆ ಸೇರಿಕೊಂಡು, ಶಿರಾಲಿ ಚೆಕ್ ಪೋಸ್ಟನಲ್ಲಿ ಸಮವಸ್ತ್ರದಲ್ಲಿ ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದ ಫಿರ್ಯಾದಿ ಹಾಗೂ ಸಾಕ್ಷಿದಾರ -4 ಮತ್ತು 5 ನೇಯವರು ನಿಮ್ಮ ಕಾರನ್ನು ತಪಾಸಣೆ ಮಾಡಲು ಕೈ ಸನ್ನೆ ಮಾಡಿ ಕಾರನ್ನು ನಿಲ್ಲಿಸಲು ಮುಂದಾದಾಗ, ಕಾರಿನ ಒಳಗೆ ಚಾಲಕನ ಪಕ್ಕದಲ್ಲಿರುವ ಮತ್ತೊಬ್ಬ ಆರೋಪಿ ಸಿಬ್ಬತುಲ್ಲಾ "ಎಕಲೆಕೊ ಮಾರ್ ದೊ"ಎಂದು ಉರ್ದು ಭಾಷೆಯಲ್ಲಿ ಕಾರಿನ ಚಾಲಕನಾದ 1 ನೇ ಆರೋಪಿಯಾದ ನಿನಗೆ ಹೇಳಿದಾಗ 1 ನೇ ಆರೋಪಿಯಾದ ನೀನು ಕಾರನ್ನು ನಿಲ್ಲಿಸದೇ ಚಲಾಯಿಸಿಕೊಂಡು ಹೋಗಿ ಫಿರ್ಯಾದಿ ಹಾಗೂ ಸಾಕ್ಷಿದಾರ 4 ಮತ್ತು 5 ನೇಯವರಿಗೆ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದರಿಂದ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 353 ಸಹವಾಚಕ 34 ರಡಿಯಲ್ಲಿ

KAUK010010262022

ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿದ್ದೀರಾ ಎಂದು ಆರೋಪಿಸಲಾಗಿರುತ್ತದೆ.

ಕೊನೇಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಗಳಾದ ನೀವುಗಳು ಹಾಗೂ ಮತ್ತೊಬ್ಬ ಆರೋಪಿಯಾದ ಸಿಬ್ಬತುಲ್ಲಾ ಜೊತೆ ಸೇರಿ ಶಿರಾಲಿ ಚೆಕ್ ಪೋಸ್ಟನಲ್ಲಿ ಕಾರನ್ನು ಚಲಾಯಿಸಿಕೊಂಡು ಬಂದು ಸಮವಸ್ತ್ರದಲ್ಲಿ ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದ ಫಿರ್ಯಾದಿ ಹಾಗೂ ಸಾಕ್ಷಿದಾರ -4 ಮತ್ತು 5 ನೇಯವರು ನಿಮ್ಮ ಕಾರನ್ನು ತಪಾಸಣೆ ಮಾಡಲು ಕೈ ಸನ್ನೆ ಮಾಡಿ ಕಾರನ್ನು ನಿಲ್ಲಿಸಲು ಮುಂದಾದಾಗ, ಕಾರನ್ನು ನಿಲ್ಲಿಸದೇ ಚಲಾಯಿಸಿಕೊಂಡು ಬಂದು ಫಿರ್ಯಾದಿ ಹಾಗೂ ಸಾಕ್ಷಿದಾರ 4 ಮತ್ತು 5 ನೇಯವರ ಮೇಲೆ ಹಾಯಿಸಿ ಅವರನ್ನು ಕೊಲೆ ಮಾಡಲು ಪ್ರಯತ್ನಿಸಿದ್ದು, ಫಿರ್ಯಾದಿ ಹಾಗೂ ಸಾಕ್ಷಿದಾರ 4 ಮತ್ತು 5 ರವರು ಈ ಘಟನೆಯಿಂದ ತಪ್ಪಿಸಿಕೊಂಡಾಗ ರಸ್ತೆಗೆ ಅಡ್ಡಲಾಗಿ ಹಾಕಿದ ಬ್ಯಾರಿಕೇಡಗಳಿಗೆ ಕಾರನ್ನು ಡಿಕ್ಕಿ ಹೊಡೆದು ಸ್ಥಳದಲ್ಲಿ ಕಾರನ್ನು ನಿಲ್ಲಿಸದೇ ಚಲಾಯಿಸಿಕೊಂಡು ಹೋಗಿದ್ದರಿಂದ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 307 ಸಹವಾಚಕ 34 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿದ್ದೀರಾ ಎಂದು ಆರೋಪಿಸಲಾಗಿರುತ್ತದೆ.

ಆರೋಪಿಗಳಾದ ನೀವು ಮೇಲ್ಕಂಡ ಆರೋಪಗಳಿಗೆ ಇದೇ ನ್ಯಾಯಾಲಯದಲ್ಲಿ, ನನ್ನ ಮುಂದೆ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಿರ್ದೇಶಿಸಿರುತ್ತೇನೆ.

(ಮಾಯಣ್ಣ ಬಿ. ಎಲ್,)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ದಿನಾಂಕಃ 08.06.2023 ಉತ್ತರ ಕನ್ನಡ, ಕಾರವಾರ

KAUK010010262022

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಉತ್ತರ ಕನ್ನಡ, ಕಾರವಾರ**

**ಸೇಷನ್ಸ ಕೇಸ ನಂ. 26/2022**

ಫಿರ್ಯಾದಿ - ಸರ್ಕಾರ - ಭಟ್ಕಳ ಗ್ರಾಮೀಣ ಪೋಲಿಸ ಠಾಣೆ

ವಿರುದ್ಧ,

ಆರೋಪಿ/ಗಳು - 1. ಅಬ್ರಾರ್ ಶೇಖ್ ತಂದೆ ಮೋಹಿದ್ದೀನ್ ಶೇಕ್ ಮತ್ತು ಇತರರು.

**ದೋಷಾರೋಪಣೆ**

ಆರೋಪಿಯ ಹೆಸರು - ಅಬ್ರಾರ್ ಶೇಖ್

ತಂದೆಯ ಹೆಸರು - ಮೊಹಿದ್ದೀನ್ ಶೇಕ್

ವಯಸ್ಸು - 20 ವರ್ಷ

ಉದ್ಯೋಗ - ಚಾಲಕ ಕೆಲಸ

ವಾಸ - ಸಾಃ ಪಿರ್ದೋಶ ನಗರ, ಹೆಬಳೆ
ತಾಃ ಭಟ್ಕಳ.

**ಆರೋಪಿಯ ಹೇಳಿಕೆ**

ಪ್ರಶ್ನೆಃ ನಿನ್ನ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿನಗೆ ತಿಳಿಯಿತೆ?
ಉತ್ತರಃ ತಿಳಿಯಿತು.

ಪ್ರಶ್ನೆಃ ನೀನು ತಪ್ಪು ಒಪ್ಪಿಕೊಳ್ಳುತ್ತಿಯಾ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತೀಯಾ?
ಉತ್ತರಃ ವಿಚಾರಣೆ ಆಗಬೇಕು.

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವನು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

(ಮಾಯಣ್ಣ ಬಿ. ಎಲ್,)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ, ಕಾರವಾರ

ದಿನಾಂಕಃ 08.06.2023

KAUK010010262022

**<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಉತ್ತರ ಕನ್ನಡ, ಕಾರವಾರ</u>**

**<u>ಸೇಷನ್ಸ ಕೇಸ ನಂ. 26/2022</u>**

ಫಿರ್ಯಾದಿ - ಸರ್ಕಾರ - ಭಟ್ಕಳ ಗ್ರಾಮೀಣ ಪೋಲಿಸ ಠಾಣೆ

ವಿರುದ್ಧ,

ಆರೋಪಿ/ಗಳು - 1. ಅಬ್ರಾರ್ ಶೇಖ್ ತಂದೆ ಮೋಹಿದ್ದೀನ್ ಶೆಕ್ ಮತ್ತು ಇತರರು.

**<u>ದೋಷಾರೋಪಣೆ</u>**

ಆರೋಪಿಯ ಹೆಸರು - ಮಕ್ಷೂದ ಮಂಜೂರ್ ತಂದೆ ಅಬ್ದುಲ್ ಕರೀಮ್ ಶಾಬಂದ್ರಿ

ತಂದೆಯ ಹೆಸರು - ತಂದೆ ಅಬ್ದುಲ್ ಕರೀಮ್ ಶಾಬಂದ್ರಿ

ವಯಸ್ಸು - 26 ವರ್ಷ

ಉದ್ಯೋಗ - ಗ್ರೀನ ಗಾರ್ಡನ ನರ್ಸರಿ

ವಾಸ - ಸಾಃ ಹನೀಫಾಬಾದ ಮುನೀರ್ ಪಳ್ಳಿ ಹತ್ತಿರ,
ಹೆಬಳೆ, ತಾಃ ಭಟ್ಕಳ.

**<u>ಆರೋಪಿಯ ಹೇಳಿಕೆ</u>**

ಪ್ರಶ್ನೆಃ ನಿನ್ನ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿನಗೆ ತಿಳಿಯಿತೆ?
ಉತ್ತರಃ ತಿಳಿಯಿತು.

ಪ್ರಶ್ನೆಃ ನೀನು ತಪ್ಪು ಒಪ್ಪಿಕೊಳ್ಳುತ್ತಿಯಾ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತೀಯಾ?
ಉತ್ತರಃ ವಿಚಾರಣೆ ಆಗಬೇಕು.

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವನು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

(ಮಾಯಣ್ಣ ಬಿ. ಎಲ್,)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ, ಕಾರವಾರ

ದಿನಾಂಕಃ 08.06.2023